UASB LIBRARY
Newspaper Clippings
Pg .1 Friday 19-11-2021 Jai Kisan



ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಜತೆ ಬಿಬಿಎಂಪಿ ಒಪ್ಪಂದ » ಮುಂದಿನ ವರ್ಷ ಕಾರ್ಯಾರಂಭ

ಮರಗಳ ಗಣತಿಗೆ 4.5 ಕೋಟಿ ರೂ. ಖರ್ಚು!

■ ಸತೀಶ್ ಕಂದಗಲ್‌ಪುರ ಬೆಂಗಳೂರು

ರಾಜಧಾನಿ ವ್ಯಾಪ್ತಿಯಲ್ಲಿರುವ ಮರಗಳನ್ನು ಗಣತಿ ಮಾಡುವಂತೆ ಹೈಕೋರ್ಟ್ ಸೂಚಿಸಿ 3 ವರ್ಷಗಳ ಬಳಿಕ ಬಿಬಿಎಂಪಿ ಈ ಕಾರ್ಯಕ್ಕೆ ಮುಂದಾಗಿದೆ. ಇದಕ್ಕಾಗಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಜತೆ ಒಪ್ಪಂದ ಮಾಡಿಕೊಳ್ಳುತ್ತಿದೆ.

ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ-1976 ಜಾರಿಗೊಂಡು 45 ವರ್ಷ ಕಳೆದರೂ ಉದ್ಯಾನನಗರಿ ಎಂಬ ಹೆಗ್ಗಳಿಕೆ ಪಡೆದಿರುವ ಬೆಂಗಳೂರಿನಲ್ಲಿ ಮರಗಳ ಗಣತಿ ಕಾರ್ಯ ನಡೆದಿಲ್ಲ. ಅಭಿವೃದ್ಧಿ ಹೆಸರಿನಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳಾದ ಬಿಬಿಎಂಪಿ, ಬಿಡಿಎ, ನಮ್ಮ ಮೆಟ್ರೋ, ಬೆಸ್ಕಾಂ ಹಾಗೂ ಜಲಮಂಡಳಿ, ರಿಯಲ್ ಎಸ್ಟೇಟ್ ಉದ್ಯಮಿಗಳು ಹಾಗೂ ಖಾಸಗಿ ವ್ಯಕ್ತಿಗಳು ಲಕ್ಷಾಂತರ ಮರಗಳನ್ನು ಕಡಿದಿದ್ದಾರೆ. ಈಗ ಉಳಿದಿರುವ ಮರಗಳನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಸಾರ್ವಜನಿಕ ಸ್ಥಳದಲ್ಲಿರುವ ಮರಗಳನ್ನು ಗಣತಿ ಮಾಡುವಂತೆ ಪಾಲಿಕೆಗೆ 2019ರ ಜೂ.24 ರಂದು ಹೈಕೋರ್ಟ್ ಸೂಚನೆ ನೀಡಿತ್ತು. ಮೂರು ವರ್ಷಗಳಾದರೂ ಮರಗಣತಿ ಆರಂಭಿಸದ ಪಾಲಿಕೆಗೆ ನ್ಯಾಯಾಲಯ ಮತ್ತೊಮ್ಮೆ ತರಾಟೆಗೆ ತೆಗೆದುಕೊಂಡರೂ ಅಧಿಕೃತ ಮರಗಣತಿ ಕಾರ್ಯ ಆರಂಭಿಸಿರಲಿಲ್ಲ.

» ಮರಕ್ಕೆ ತಲಾ 30 ರೂ. ವೆಚ್ಚ
» ಹೈಕೋರ್ಟ್ ಸೂಚನೆಯ 3 ವರ್ಷಗಳ ಬಳಿಕ ಗಣತಿ


ಮರಗಳ ಗಣತಿ ಮಾಡುತ್ತಿರುವ ಸಿಬ್ಬಂದಿ (ಸಂಗ್ರಹ ಚಿತ್ರ).

4.5 ಕೋಟಿ ರೂ.ಗೆ ಒಪ್ಪಂದ: ಮರಗಳನ್ನು ಗಣತಿ ಮಾಡಲು ಪಾಲಿಕೆ ಅರಣ್ಯ ವಿಭಾಗದಲ್ಲಿ ಸಮರ್ಪಕ ಸಿಬ್ಬಂದಿ ಲಭ್ಯವಿಲ್ಲದ ಹಿನ್ನೆಲೆಯಲ್ಲಿ 'ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ' (ಐಡಬ್ಲ್ಯುಎಸ್‌ಟಿ) ಜತೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ, ವಿವಿಧ ಕಾರಣಗಳಿಂದ ಐಡಬ್ಲ್ಯುಎಸ್‌ಟಿ ಮರಗಣತಿ ಆರಂಭಿಸಲಿಲ್ಲ. ಹೀಗಾಗಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರಕ್ಕೆ (ಜಿಕೆವಿಕೆ) ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದಕ್ಕೆ ಒಪ್ಪಿದ ಜಿಕೆವಿಕೆ, 4.5 ಕೋಟಿ ರೂ.ಗೆ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ. ಈ ಬಗ್ಗೆ ಪಾಲಿಕೆ ಮುಖ್ಯ ಆಯುಕ್ತರಿಂದಲೂ ಅನುಮೋದನೆ ದೊರೆತಿದ್ದು, ಮುಂದಿನ ಜನವರಿಯಲ್ಲಿ ಗಣತಿ ಕಾರ್ಯ ಆರಂಭವಾಗಲಿದೆ ಎಂದು ಪಾಲಿಕೆ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಒಂದು ಮರ ಗಣತಿಗೆ 30 ರೂ.!: ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) 2014ರಲ್ಲಿ ಸಲ್ಲಿಸಿದ್ದ ವರದಿಯಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 14.78 ಲಕ್ಷ ಮರಗಳಿದ್ದವು. ಪಾದರಾಯನಪುರ, ಶಿವಾಜಿನಗರ, ಚಿಕ್ಕಪೇಟೆ, ಕೆಂಪಾಪುರ ಅಗ್ರಹಾರ ಮತ್ತು ಕುಶಾಲನಗರ ವಾರ್ಡ್‌ಗಳಲ್ಲಿ ಅತಿಕಡಿಮೆ ಮರಗಳಿವೆ. ವರ್ತೂರು, ಬೆಳ್ಳಂದೂರು, ಆರಮನೆ ನಗರ, ಆಗರ ವಾರ್ಡ್‌ಗಳಲ್ಲಿ ಸರಾಸರಿ 40 ಸಾವಿರ ಮರಗಳಿವೆ. ಈ ಆಂಕಿ-ಅಂಶದ ಆಧಾರದಲ್ಲಿ ಒಟ್ಟು 15 ಲಕ್ಷ ಮರಗಳ ಗಣತಿಗೆ 4.5 ಕೋಟಿ ರೂ. ನೀಡಲು ಮುಂದಾಗಿರುವ ಬಿಬಿಎಂಪಿ ಪ್ರತಿ ಮರದ ಗಣತಿಗೆ ತಲಾ 30 ರೂ. ಖರ್ಚು ಮಾಡುತ್ತಿದೆ. ಸರ್ಕಾರದಿಂದ ಅರಣ್ಯ ಕೃಷಿ ಯೋಜನೆಯಡಿ ಒಂದು ಸಸಿ ನೆಟ್ಟು ಪೋಷಣೆ ಮಾಡಿ ಬೆಳೆಸಲು 50 ರೂ. ಖರ್ಚು ಮಾಡುತ್ತಿದೆ. ಆದರೆ, ಪಾಲಿಕೆ ಬೆಳೆದು ನಿಂತಿರುವ ಮರದ ಗಣತಿಗೆ 30 ರೂ. ಖರ್ಚು ಮಾಡುತ್ತಿರುವುದು ದುಬಾರಿ ಎನಿಸುತ್ತಿದೆ.

ಹೈಕೋರ್ಟ್ ಸೂಚನೆ ಅನ್ವಯ ಕೆಲವು ವಾರ್ಡ್‌ಗಳಲ್ಲಿ ಈವರೆಗೆ 8 ಸಾವಿರ ಮರಗಳನ್ನು ಗಣತಿ ಮಾಡಲಾಗಿದೆ. ಆದರೆ, ಮುಂದಿನ ದಿನಗಳಲ್ಲಿ 243 ವಾರ್ಡ್ ರಚನೆಯಾದರೆ ಮರಗಣತಿ ವರದಿ ಅನೂರ್ಜಿತವಾಗುವ ಸಾಧ್ಯತೆಯಿದೆ. ಮುಂದಿನ ವರ್ಷ ಮರಗಣತಿ ಕಾರ್ಯ ಆರಂಭಿಸುವ ಸಾಧ್ಯತೆಯಿದೆ.

| ವಿ. ಗೋವಿಂದರಾಜು
ಬಿಬಿಎಂಪಿ ಅರಣ್ಯ ಉಪ ಸಂರಕ್ಷಣಾಧಿಕಾರಿ

ಆ್ಯಪ್, ಜಿಯೋ ಟ್ಯಾಗ್

ಮರಗಳ ಗಣತಿ ಕಾರ್ಯಕ್ಕಾಗಿ ಐಡಬ್ಲ್ಯುಎಸ್‌ಟಿ ವತಿಯಿಂದ ವಿಶೇಷ ತಂತ್ರಾಂಶ ಅಭಿವೃದ್ಧಿ ಮಾಡಲಾಗಿತ್ತು. ಆದರೆ, ಈಗ ಗಣತಿ ಕಾರ್ಯದಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ ಪಾಲಿಕೆಯಿಂದ ಪ್ರತ್ಯೇಕ 'ಬಿಬಿಎಂಪಿ ಟ್ರೀ ಸೆನ್ಸಸ್ ಆ್ಯಪ್' ಅಭಿವೃದ್ಧಿ ಮಾಡಲಾಗಿದೆ. ಜಿಕೆವಿಕೆಯೊಡನೆ ಒಪ್ಪಂದ ಪೂರ್ಣಗೊಂಡು ಗಣತಿ ಕಾರ್ಯ ಆರಂಭಿಸುವಾಗ ಆ್ಯಪ್ ಬಿಡುಗಡೆ ಮಾಡಲಾಗುತ್ತದೆ. ಆ್ಯಪ್‌ನಲ್ಲಿ ಮರಗಳ ವಿಧ, ವಯಸ್ಸು, ಸ್ಥಳದ ಬಗ್ಗೆ ರೇಖಾಂಶ ಮತ್ತು ಅಕ್ಷಾಂಶ ಮಾಹಿತಿ ಹೊಂದಿದ ಜಿಯೋ ಟ್ಯಾಗ್ ಆಳವಡಿಕೆ, ವಾರ್ಡ್, ರಸ್ತೆಗಳ ಮಾಹಿತಿ ಭರ್ತಿ ಮಾಡಲಾಗುತ್ತದೆ. ಇದು ತಾಂತ್ರಿಕ ದಾಖಲೆಯಾಗಿ ಶಾಶ್ವತವಾಗಿ ಉಳಿಯಲಿದ್ದು, ಮರವನ್ನು ಆನ್‌ಲೈನ್ ಮೂಲಕ ವೀಕ್ಷಣೆ ಮಾಡಬಹುದು ಎಂದು ಪಾಲಿಕೆ ಅರಣ್ಯ ವಿಭಾಗದ ಅಧಿಕಾರಿ ತಿಳಿಸಿದ್ದಾರೆ.



ತೊಗರಿಗೆ ಕಾಡುತ್ತಿದೆ ಸೊರಗು ರೋಗ

ನಿರಂತರ ಮಳೆ ಹಾಗೂ ಹವಾಮಾನ ವೈಪರೀತ್ಯದಿಂದ ತೊಗರಿ ಬೆಳೆಗೆ 'ಸೊರಗು' ರೋಗ ಕಾಣಿಸಿಕೊಂಡಿದ್ದು, ಸಾವಿರಾರು ಹೆಕ್ಟೇರ್ ಬೆಳೆ ನಷ್ಟದ ಭೀತಿ ಕಾಡುತ್ತಿದೆ. ಈ ಬಾರಿ ಮುಂಗಾರು ಉತ್ತಮವಾಗಿದ್ದ ಕಾರಣದಿಂದ ಮಳೆಯಾಶ್ರಿತ ಪ್ರದೇಶದಲ್ಲಿ ಬಿತ್ತನೆಯಾಗಿರುವ ತೊಗರಿ ಬೆಳೆ ಉತ್ತಮವಾಗಿ ಬೆಳೆದಿದೆ. ಆದರೆ, ಕಾಯಿ ಬಿಡುವ ಹಂತದಲ್ಲಿ ನಿರಂತರ ಮಳೆ ಸುರಿಯುತ್ತಿದ್ದು, ಸೊರಗು ರೋಗ ಹೆಚ್ಚಾಗುತ್ತಿದೆ. ಕೂಡಲೇ ರೋಗಪೀಡಿತ ಗಿಡಗಳನ್ನು ನಾಶಪಡಿಸುವ ಮೂಲಕ ಉಳಿದ ಬೆಳೆ ರಕ್ಷಣೆ ಮಾಡಿಕೊಳ್ಳಬೇಕು. ಜತೆಗೆ, ಡೈಥೇನ್ ಎಂ-45 ಅಥವಾ ಮೆಟಲಾಕ್ಸಿಲ್ ಎಂ ಶೇ. 4 ಮತ್ತು ಮ್ಯಾಂಕೋಜೆಬ್ ಶೇ. 64 ಶಿಲೀಂಧ್ರ ನಾಶಕವನ್ನು ಗಿಡದ ಬುಡಕ್ಕೆ ಹಾಕಬೇಕು ಎಂದು ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ವಿಜ್ಞಾನಿಗಳು ತಿಳಿಸಿದ್ದಾರೆ.



ವಿದ್ಯಾನಿಧಿ ಸ್ಕಾಲರ್‌ಶಿಪ್‌ಗೆ ರೈತರ ಮಕ್ಕಳ ನೋಂದಣಿ

ಆಧಾರ್ ಸಂಖ್ಯೆ ಅಗತ್ಯ | ಖಾತೆಗೇ ಹಣ ವರ್ಗ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದ ರೈತರ ಮಕ್ಕಳು ಪ್ರೌಢಶಾಲೆ ನಂತರ ಹೆಚ್ಚಿನ ಶಿಕ್ಷಣ ಮುಂದುವರೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇತ್ತೀಚೆಗೆ ಘೋಷಿಸಿದ 'ರೈತ ವಿದ್ಯಾನಿಧಿ' ವಾರ್ಷಿಕ ಶಿಷ್ಯವೇತನಕ್ಕೆ ವಿದ್ಯಾರ್ಥಿಗಳ ನೋಂದಣಿಗೆ ಕ್ರಮ ವಹಿಸುವಂತೆ ಕೃಷಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳು ತಮ್ಮ ವ್ಯಾಪ್ತಿಯ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಚಿಸಿವೆ.



ಶಿಷ್ಯವೇತನ ಪಡೆಯಲು ಅರ್ಹ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ (ಎಸ್‌ಎಸ್‌ಪಿ) ತಮ್ಮ ಮತ್ತು ತಮ್ಮ ತಂದೆ, ತಾಯಿಯ ಆಧಾರ್ ಸಂಖ್ಯೆಯೊಂದಿಗೆ ನೋಂದಣಿ ಮಾಡಿಕೊಳ್ಳಬೇಕು. ವಿದ್ಯಾರ್ಥಿಯ ದಾಖಲೆಗಳ ಪರಿಶೀಲನೆ ಬಳಿಕ ನೇರ ನಗದು ಮೂಲಕ ವಿದ್ಯಾರ್ಥಿಗಳ ಖಾತೆಗೆ ಶಿಷ್ಯವೇತನ ಜಮೆಯಾಗುತ್ತದೆ. ಹಾಗಾಗಿ ಈ ಬಗ್ಗೆ ಭಿತ್ತಿ ಪತ್ರಗಳನ್ನು ಹೊರಡಿಸಿ ಕಾಲೇಜುಗಳಲ್ಲಿ ಹಂಚಿ ಎಲ್ಲ ಅರ್ಹ ವಿದ್ಯಾರ್ಥಿಗಳ ನೋಂದಣಿಗೆ ಪ್ರಾಂಶುಪಾಲರು ಕ್ರಮ ವಹಿಸಬೇಕು. ವಿದ್ಯಾರ್ಥಿಗಳು ಬ್ಯಾಂಕ್ ಉಳಿತಾಯ ಖಾತೆತೆರೆದು ಆಧಾರ್ ಜೋಡಿಸಿ ಖಾತೆಯ ಮಾಹಿತಿಯನ್ನು ತಂತ್ರಾಂಶದಲ್ಲಿ ನೀಡಬೇಕು ಎಂದು ಸೂಚಿಸಲಾಗಿದೆ.

ವರ್ಷಕ್ಕೊಮ್ಮೆ ನೀಡುವ ಈ ವಿದ್ಯಾರ್ಥಿವೇತನಕ್ಕೆ ಅರ್ಹರಾದವರಿಗೆ ಅವರ ಕೋರ್ಸ್‌ಗಳಿಗೆ ಅನುಗುಣವಾಗಿ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

19-11-2021 Vv Pg 03
19-11-2021 Kp Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in

"Beautiful things happen when you distance yourself from negativity"

ಪ್ರಕೃತಿ ವಿಕೋಪ | ತೊಗರಿ ಹೂವು ಉದುರಿ ಸಂಕಷ್ಟ | ಭತ್ತ, ರಾಗಿ, ಹತ್ತಿಗೆ ಜಮೀನಿನಲ್ಲೇ ಕೊಳೆಯುವ ದುಸ್ಥಿತಿ: ಬೆಳೆಗಾರರು ಕಂಗಾಲು

ನಿರಂತರ ಮಳೆಯಿಂದ ರಾಜ್ಯಾದ್ಯಂತ ಹಲವು ಬೆಳೆ ನಾಶ

• ಕನ್ನಡಪ್ರಭ ವಾರ್ತೆ
ಬೆಂಗಳೂರು

ರಾಜ್ಯದಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಅಪಾರ ಪ್ರಮಾಣದಲ್ಲಿಬೆಳೆನಾಶವಾಗಿದೆ. ರಾಜ್ಯದಲ್ಲಿ ಮಳೆಯ ಹೊಡೆತಕ್ಕೆ ಅನ್ನದಾತತತ್ತರಿಸಿ ಹೋಗಿದ್ದಾನೆ. ನವೆಂಬರ್, ಡಿಸೆಂಬರ್ ತಿಂಗಳನಲ್ಲಿ ಬೆಳೆಯು ರೈತನ ಕೈ ಸೇರುತ್ತದೆ.

ಆದರೆ ಈ ಬಾರಿ ಮಳೆಯಿಂದಾಗಿ ಬೆಳೆಗಳು ಜಮೀನಿನಲ್ಲಿಯೇ ಹಾಳಾಗುತ್ತಿವೆ. ಭತ್ತ, ರಾಗಿ, ಮೆಕ್ಕೆ ಜೋಳ, ತೊಗರಿ ಬೆಳೆಗಳು ಮಳೆಯ ನೀರಿನಲ್ಲಿ ಸಿಲುಕಿ ನಾಶವಾಗಿದೆ. ಇನ್ನು ಅಡಕೆ, ಕಾಫಿ ಬೆಳೆಯು ಕೊಳೆ ರೋಗಕ್ಕೆ ತುತ್ತಾಗಿವೆ. ಗದಗ, ಯಾದಗಿರಿ, ಬಾಗಲಕೋಟೆಯಲ್ಲಿ ಬೆಳೆಗೆ ಹಾನಿಯಾಗಿಲ್ಲ.

ರಾಗಿ, ಭತ್ತ, ಹತ್ತಿ ನಾಶ

ಪ್ರಮುಖ ಆಹಾರ ಬೆಳೆಯಾದ ಭತ್ತ ಬೆಳೆಗೆ ಆಕಾಲಿಕ ಮಳೆಯು ಹಾನಿ ಮಾಡಿದೆ. ರಾಯಚೂರು ಜಿಲ್ಲೆಯಲ್ಲಿ700 ಹೆಕ್ಟೇರ್, ದಾವಣಗೆರೆಯಲ್ಲಿ 1122 ಹೆಕ್ಟೇರ್‌ನಲ್ಲಿಕ್ರಮವಾಗಿ ಮೆಕ್ಕೆಜೋಳ ಹಾಗೂ ಹತ್ತಿ, ಚಿತ್ರದುರ್ಗ ಜಿಲ್ಲೆಯ 2.60 ಲಕ್ಷ ಹೆಕ್ಟೇರ್‌ನಲ್ಲಿಶೇಂಗಾ ಕೊಳೆಯುತ್ತಿದೆ. ದಾವಣಗೆರೆ ಜಿಲ್ಲೆಯಲ್ಲಿ 1147 ಎಕರೆ ಭತ್ತ, ಮೆಕ್ಕೆಜೋಳ ಇತರೆ ಬೆಳೆ ನಾಶವಾಗಿದೆ. ಶಿವಮೊಗ್ಗ 74 ಹೆಕ್ಟೇರ್ ಭತ್ತ, 14 ಹೆಕ್ಟೇರ್ ಮೆಕ್ಕೆಜೋಳ ಮತ್ತು 2 ಹೆಕ್ಟೇರ್ ಪ್ರದೇಶದಲ್ಲಿ ರಾಗಿ, ಕೋಲಾರ ಜಿಲ್ಲೆಯಲ್ಲಿ 35 ಸಾವಿರ ಎಕರೆ ರಾಗಿ ಬೆಳೆ ಹಾನಿಯಾಗಿದೆ. ಬಳ್ಳಾರಿಯಲ್ಲಿ 1685, ವಿಜಯನಗರ ಜಿಲ್ಲೆಯಲ್ಲಿ 68 ಹೆಕ್ಟೇರ್‌ನಲ್ಲಿದ್ದ ಭತ್ತ, ಮೆಕ್ಕೆ ಜೋಳ ನಾಶವಾಗಿದೆ. ಚಾಮರಾಜನಗರ ಜಿಲ್ಲೆಯ 1500ಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ರಾಗಿ, ಮೆಕ್ಕೆಜೋಳ, ಕಡಲೆ ನಾಶವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ73 ಹೆಕ್ಟೇರ್ ಭತ್ತ, ಅಡಕೆ ಮತ್ತು ತೆಂಗು ಸೇರಿ ಒಟ್ಟು 223.12 ಹೆಕ್ಟೇರ್, ಉಡುಪಿ ಜಿಲ್ಲೆಯಲ್ಲಿ 35,700 ಹೆಕ್ಟೇರ್, ಉತ್ತರ ಕನ್ನಡ ಜಿಲ್ಲೆಯಲ್ಲಿ ಭತ್ತ 1 ಸಾವಿರ ಹೆಕ್ಟೇರ್, ಹಾವೇರಿ ಜಿಲ್ಲೆಯಲ್ಲಿ 10509 ಹೆಕ್ಟೇರ್‌ನಲ್ಲಿ ಮೆಳೆಗೆ ಭತ್ತ, ಹತ್ತಿ, ಮೆಣಸಿನಕಾಯಿ ನಾಶವಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಸುಮಾರು 2177, ಧಾರವಾಡ ಜಿಲ್ಲೆಯಲ್ಲಿ 7500 ಹೆಕ್ಟೇರ್ ಬೆಳೆ ಹಾನಿಯಾಗಿದೆ.

ಉದುರಿದ ತೊಗರಿ ಹೂವು

ಕಲಬುರಗಿ ಜಿಲ್ಲೆಯಲ್ಲಿ ತೊಗರಿ ಬೆಳೆ ಪ್ರಮುಖವಾಗಿದ್ದು, ಜಿಟಿಜಿಟಿ ಮಳೆ ಹಾಗೂ ಮುಸುಕಿನ ಮಂಜಿನಿಂದ ತೊಗರಿ ಬೆಳೆಗಳ ಹೂವು ಮತ್ತು ಮೊಗ್ಗು ಉದುರಿ ಹೋಗಿದೆ. ಬೆಳೆಗೆ ತುಂಬ ಹಾನಿಯಾಗುವ ಭೀತಿ ಎದುರಾಗಿದೆ. ಈಗಾಗಲೇ 40 ಸಾವಿರ ಹೆಕ್ಟೇರ್ ಪ್ರದೇಶದಲ್ಲಿತೊಗರಿ ಬೆಳೆಗೆ ಹಾನಿಯಾಗಿದೆ.

ಕಾಫಿ, ಅಡಕೆಗೆ ಹಾನಿ

ಚಿಕ್ಕಮಗಳೂರು-ಕೊಡಗು, ಹಾಸನ ಜಿಲ್ಲೆಯ ಪ್ರಮುಖ ಬೆಳೆಯಾದ ಕಾಫಿ, ಕಾಳು ಮೆಣಸು, ಅಡಕೆ ಹಾಗೂ ಭತ್ತದ ಬೆಳೆಗೆ ಹಾನಿ ಸಂಭವಿಸಿದೆ. ಕಾಫಿಯ ಹಣ್ಣುಗಳು ನೆಲಕ್ಕೆ ಉದುರಿದ್ದು, ಶೇ.50ರಷ್ಟು ಹಾನಿಯಾಗಿದ್ದರೆ, ಮೆಣಸು ಬೆಳೆಗೆ ಶೇ.30ರಷ್ಟು ನಷ್ಟವಾಗಿದೆ. ಮೈಸೂರು ಜಿಲ್ಲೆಯಲ್ಲಿ ಮಳೆ ಹಾನಿಯ ಸಮೀಕ್ಷೆಗೆ ಮಳೆಯೇ ಅಡ್ಡಿಯಾಗಿದೆ. ಇಷ್ಟೇ ಅಲ್ಲದೆ ಮೆಣಸಿನಕಾಯಿ, ನೂರಾರು ಎಕರೆಯಲ್ಲಿಬೆಳೆದಕಾಯಿಪಲ್ಲೆ, ತೋಟಗಾರಿಕೆ ಬೆಳೆಗಳು ಮಳೆಯಿಂದ ನಷ್ಟವಾಗಿದೆ. ಪಪ್ಪಾಯ ಬೆಳೆಯು ನಷ್ಟವಾಗಿದೆ.

ರಾಜ್ಯದಲ್ಲಿ ಇನ್ನೂ ಮೂರು ದಿನ ಬಿರುಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ಹಿಂಗಾರು ಮಳೆಯ ಅಬ್ಬರ ಇನ್ನಷ್ಟು ಹೆಚ್ಚಾಗಿದ್ದು, ನವೆಂಬರ್ 21ರವರೆಗೂ ರಾಜ್ಯದ ಬಹುತೇಕ ಕಡೆ ಬಿರುಸಿನ ಮಳೆ ಬೀಳಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಶುಕ್ರವಾರ (ನ.19) ಕರಾವಳಿ, ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳು ಮತ್ತು ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಭಾರಿ ಮಳೆ ಸುರಿಯಲಿದ್ದು, 'ಯೆಲ್ಲೋ ಅಲರ್ಟ್' ಎಚ್ಚರಿಕೆ ನೀಡಲಾಗಿದೆ. ಇದೇ ವೇಳೆ ಬಂಗಾಳ ಕೊಲ್ಲಿಯಲ್ಲಿನ ವಾಯುಭಾರ ಕುಸಿತದ ಪರಿಣಾಮ ಒಳನಾಡಿನ ಜಿಲ್ಲೆಗಳಲ್ಲಿ ಮಳೆಯ ಅಬ್ಬರ ಮತ್ತಷ್ಟು ಹೆಚ್ಚಾಗುವ ಸಂಭವ ಇದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಧಾರವಾಡ, ಬೆಳಗಾವಿ, ಗದಗ, ಹಾವೇರಿ, ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಗುಡುಗು, ಮಿಂಚು, ಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ.

19-11-2021 Kp Pg 08

19-11-2021 Uv Pg 08

ಕ್ಯಾಲಿಫೋರ್ನಿಯಾ ಕಾಂಡರ್ಸ್ ಕುತೂಹಲಕಾರಿ ಸಂತಾನೋತ್ಪತ್ತಿ

ಗಂಡಿನ ಸಂಪರ್ಕವಿಲ್ಲದೆ ಪಕ್ಷಿ ಜನನ

ವಾಷಿಂಗ್ಟನ್: ಕ್ಯಾಲಿಫೋರ್ನಿಯಾ ಕಾಂಡರ್ಸ್ ಎಂಬ ಜಾತಿಯ ಪಕ್ಷಿಗಳು, ಈಗ ತನ್ನ ಜಾತಿಯ ಪುರುಷ ಹಕ್ಕಿಯ ಸಹಾಯವಿಲ್ಲದೆ ಜನಿಸಬಲ್ಲ ಜೀವಿಗಳ ವರ್ಗಕ್ಕೆ ಹೊಸದಾಗಿ ಸೇರಲ್ಪಟ್ಟಿವೆ! ಇತ್ತೀಚಿನ ವರ್ಷಗಳಲ್ಲಿ ಈ ಜಾತಿಯಲ್ಲಿ ಜನಿಸಿರುವ ಎರಡು ಗಂಡು ಹಕ್ಕಿಗಳ ಡಿಎನ್‌ಎಯನ್ನು ಪರೀಕ್ಷಿಸಿದಾಗ ಇವು ಕೇವಲತಾಯಿಯ ಅಂಡಾಣುವಿನಿಂದ ರೂಪುಗೊಂಡಿರುವ ಪಕ್ಷಿಗಳೆಂಬುದು ಪತ್ತೆಯಾಗಿವೆ. ಇವುಗಳಲ್ಲಿ ಯಾವುದೇ ಪುರುಷ ಹಕ್ಕಿಯ ಅಂಶಗಳು ಪತ್ತೆಯಾಗಿಲ್ಲದಿರುವುದು ವಿಜ್ಞಾನಿಗಳಿಗೆ ಆಚ್ಚರಿ ತಂದಿದೆ!

1980ರ ದಶಕದಲ್ಲಿ ಅಮೆರಿಕದ ನೈರುತ್ಯ ಭಾಗದಲ್ಲಿ ಅಳಿವಿನಂಚಿಗೆ ಸರಿದಿದ್ದ 22 ಕಾಂಡೊರ್‌ಗಳನ್ನು ಗಂಡು-ಹೆಣ್ಣುಗಳ ಪ್ರತ್ಯೇಕ ಜೋಡಿಯಾಗಿಸಿ, ಪ್ರತಿಯೊಂದು ಜೋಡಿಯನ್ನೂ ಪ್ರತ್ಯೇಕ ಗೂಡುಗಳಲ್ಲಿ ಇರಿಸಲಾಗಿತ್ತು. ಅಲ್ಲಿ ಜನಿಸಿದ ಹೊಸ ಹಕ್ಕಿಗಳ ಡಿಎನ್‌ಎ ಪರೀಕ್ಷೆ ನಡೆಸಿದಾಗ ವಿಜ್ಞಾನಿಗಳು ಕೇವಲ ತಾಯಿಯಿಂದ ಜನಿಸಿದ ಎರಡು ಗಂಡು ಹಕ್ಕಿಗಳನ್ನು ಪತ್ತೆ ಹಚ್ಚಿದ್ದಾರೆ. ಹಾಗಂತ, ಈ ರೀತಿಯ ಸಂತಾನೋತ್ಪತ್ತಿ ಇದೇ ಮೊದಲೇನಲ್ಲ ಅಳಿವನಂಚಿನಲ್ಲಿರುವ ಕೆಲವು ಪ್ರಾಣಿ, ಪಕ್ಷಿಗಳಲ್ಲಿ ಇದು ನಿಸರ್ಗವೇ ದಯಪಾಲಿಸಿರುವ ಒಂದು ಸಂತಾನೋತ್ಪತ್ತಿ ಸೌಲಭ್ಯ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

■ ಸಂರಕ್ಷಿತ ಪಕ್ಷಿಗಳ ಡಿಎನ್‌ಎ ಪರೀಕ್ಷೆ ನಡೆಸಿದ ವಿಜ್ಞಾನಿಗಳಿಗೇ ಆಚ್ಚರಿ!



ಪಾರ್ಥೋಜೆನಿಸಿಸ್ ನಿಂದ ಇದು ಸಾಧ್ಯ!: ಸಾಮಾನ್ಯವಾಗಿ ಜೀವಿಗಳಲ್ಲಿ ಲೈಂಗಿಕ ಸಂಪರ್ಕಾಧಾರಿತ (ಸೆಕ್ಸುವಲ್), ಅಲೈಂಗಿಕಾಧಾರಿತ (ಅಸೆಕ್ಸುವಲ್) ಗರ್ಭಧಾರಣೆ ವ್ಯವಸ್ಥೆಯಿದೆ. ಮೇಲಿನ ಎರಡೂ ಕ್ರಮಗಳಲ್ಲಿ ಹೆಣ್ಣಿನ ಅಂಡಾಣು ಹಾಗೂ ಗಂಡಿನ ವೀರ್ಯಾಣು ಸಮ್ಮಿಲನಗೊಂಡು ಭ್ರೂಣವಾಗಿ, ಆನಂತರ ಜೀವಿಯಾಗಿ ಮಾರ್ಪಾಟಾಗುತ್ತದೆ. ಲೈಂಗಿಕತೆಯಿಲ್ಲದ ಸಂತಾನೋತ್ಪತ್ತಿಯಲ್ಲಿ ಪಾರ್ಥೋಜೆನಿಸಿಸ್ ಎಂಬ ಮತ್ತೊಂದು ಬಗೆಯಿದೆ. ಇಲ್ಲಿ ಹೆಣ್ಣಿನ ಅಂಡಾಣು ತನ್ನಂತಾನೇ ಭ್ರೂಣವಾಗಿ ಬದಲಾಗಿ, ಆನಂತರ ಜೀವಿಯಾಗುತ್ತದೆ. ಕ್ಯಾಲಿಫೋರ್ನಿಯಾ ಕಾಂಡರ್ಸ್‌ಗಳ ವಿಚಾರದಲ್ಲೂ ಹಾಗೇ ಆಗಿದೆ.

ಬೆಂಬಲ ಬೆಲೆಯಡಿ ಕೆಂಪು ಭತ್ತ ಖರೀದಿ ಇಲ್ಲ

• ರಾಜೇಶ್ ಗಾಣಿಗ ಅಚ್ಲಾಡಿ

ಕೋಟ: ಕನಿಷ್ಠ ಬೆಂಬಲ ಬೆಲೆಯಡಿ ಭತ್ತ ಖರೀದಿಗೆ ನೋಂದಣಿ ಆರಂಭವಾಗಿದ್ದರೂ ಉಡುಪಿ ಮತ್ತು ದಕ್ಷಿಣ ಕನ್ನಡದ ಶೇ.90 ರೈತರಿಗೆ ನಿರಾಶೆಯೇ ಕಾದಿದೆ. ಪ್ರಸ್ತುತ ಮಾನದಂಡದಂತೆ ಯೋಜನೆಯಡಿ ಕೆಂಪು ಭತ್ತ ಖರೀದಿಗೆ ಅವಕಾಶ ಇಲ್ಲದಿರುವುದೇ ಇದಕ್ಕೆ ಕಾರಣ. ಇದನ್ನು ಶೀಘ್ರವೇ ಬದಲಾಯಿಸಿದರೆ ಮಾತ್ರ ಕರಾವಳಿಯ ರೈತರಿಗೆ ಪ್ರಯೋಜನವಾಗಲು ಸಾಧ್ಯ.

ಸಾಕಷ್ಟು ಹೋರಾಟಗಳ ಆನಂತರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ಬೆಂಬಲ ಬೆಲೆಯಲ್ಲಿ ಭತ್ತ ಖರೀದಿಗಾಗಿ ರೈತರ ನೋಂದಣಿ ಆರಂಭವಾಗಿದೆ. ಆದರೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ. 90 ರೈತರು ಎಂಒ 4 ತಳಿಯ ಕೆಂಪು ಭತ್ತವನ್ನೇ ಬೆಳೆಯುತ್ತಾರೆ. ಆದ್ದರಿಂದ ಅವರಾರಿಗೂ ನೋಂದಣಿಗೆ ಅವಕಾಶ ಇಲ್ಲ.

ಕಳೆದ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಕೃಷಿ ಇಲಾಖೆ ಮೂಲಕ 2 ಸಾವಿರ ಕ್ವಿಂಟಾಲ್ ಭತ್ತದ ಬೀಜ ಬಿತ್ತನೆಯಾಗಿತ್ತು. ಇದರಲ್ಲಿ1,700 ಕ್ವಿಂಟಾಲ್ ಎಂಒ4 ತಳಿ. ದಕ್ಷಿಣ ಕನ್ನಡದಲ್ಲಿಇಲಾಖೆಯ ಮೂಲಕ 598 ಕ್ವಿ. ಬಿತ್ತನೆ ಬೀಜ ಮಾರಾಟವಾಗಿದ್ದು ಅದರಲ್ಲಿ418 ಕ್ವಿಂಟಾಲ್ ಎಂಒ 4. ಖಾಸಗಿಯಾಗಿ ಮಾರಾಟವಾಗುವ ಬೀಜದಲ್ಲೂ ಇದೇ ತಳಿಯ ಪ್ರಮಾಣ ಹೆಚ್ಚು.

ಉಭಯ ಜಿಲ್ಲೆಯಲ್ಲಿ ಬೆಂಬಲ ಬೆಲೆ ನೋಂದಣಿ ಆರಂಭಕ್ಕೆ ಜಿಲ್ಲಾಧಿಕಾರಿಗಳು ಹೊರಡಿಸಿರುವ ಅಧಿಸೂಚನೆಯಲ್ಲೂಕೆಂಪು ತಳಿ ಭತ್ತವನ್ನು ಹೊರತುಪಡಿಸಿ ಸಾಮಾನ್ಯ ಭತ್ತವನ್ನು ಪ್ರತಿ ಕ್ವಿ.ಗೆ 1,940 ರೂ.ಗಳಂತೆ ಹಾಗೂ ಎ ಗ್ರೇಡ್ ಭತ್ತವನ್ನು 1,960 ರೂ.ಗಳಂತೆ ಖರೀದಿಸಲು ಆದೇಶಿಸಿದ್ದಾರೆ. ಕೆಂಪು ತಳಿ ಭತ್ತವನ್ನು ಸರಕಾರದ ಮಾರ್ಗಸೂಚಿ ಪ್ರಕಟವಾದ ಮೇಲೆ ನೋಂದಣಿ ಆರಂಭಿಸುವುದಾಗಿ ತಿಳಿಸಿದ್ದಾರೆ.

ಆದೇಶ ಜಾರಿಯಾದರಷ್ಟೇ ಅನುಕೂಲ: ಅವಿಭಜಿತ ದ.ಕ. ಜಿಲ್ಲೆಯಲ್ಲಿ ಬಹುತೇಕ ಕೆಂಪು ತಳಿಯ ಭತ್ತವನ್ನೇ ಬೆಳೆಯುವುದರಿಂದ ಬೆಂಬಲ ಬೆಲೆ ಕೇಂದ್ರದಲ್ಲಿ ಇದರ ಖರೀದಿಗೆ ಅವಕಾಶ ನೀಡಬೇಕು ಎಂದು ಆಹಾರ ಇಲಾಖೆಯಿಂದ ಸರಕಾರಕ್ಕೆ ಮನವಿ ಸಲ್ಲಿಕೆಯಾಗಿದೆ. ಆದರೆ ಭತ್ತಕ್ಕೆ ಮುಖ್ಯವಾಗಿ ಬೆಂಬಲ ಬೆಲೆ ನಿಗಡಿಪಡಿಸುವುದು ಕೇಂದ್ರ ಸರಕಾರವಾದ್ದರಿಂದ ಅಲ್ಲಿಂದ ಅನುಮೋದನೆ ಸಿಗಬೇಕಿದೆ. ಒಮ್ಮೆ ಆದೇಶ ಜಾರಿಯಾದಲ್ಲಿ ಪ್ರತೀ ವರ್ಷ ಖರೀದಿಗೆ ಅನುಕೂಲವಾಗುತ್ತದೆ. ಕೇಂದ್ರ ಸರಕಾರಕ್ಕೂ ಮನವಿ ಸಲ್ಲಿಕೆಯಾಗಿದ್ದು ಪ್ರಕ್ರಿಯೆ ಚಾಲನೆಯಲ್ಲಿದೆ. ವಾರದಲ್ಲಿಈ ಕುರಿತು ಪೂರಕ ಆದೇಶ ಹೊರಬೀಳಬಹುದು ಎನ್ನುತ್ತಾರೆ ಇಲಾಖೆಯ ಪ್ರಮುಖರು. ಕೆಂಪು ಭತ್ತ ಖರೀದಿಗೆ ಅನುಮೋದನೆ ದೊರಕದಿದ್ದಲ್ಲಿ ಬೆಂಬಲ ಬೆಲೆ ಖರೀದಿ ಕೇಂದ್ರದಿಂದ ಉಭಯ ಜಿಲ್ಲೆಗಳ ರೈತರಿಗೆ ಚಿಕ್ಕಾಸು ಪ್ರಯೋಜನವಿಲ್ಲವಾಗುತ್ತದೆ. ಈ ಕುರಿತು ಅಧಿಕಾರಿಗಳು, ಜನಪ್ರತಿನಿಧಿಗಳು ತತ್‌ಕ್ಷಣ ಕಾರ್ಯಪ್ರವೃತ್ತರಾಗಬೇಕಿದೆ.

> ಅವಿಭಜಿತ ದ.ಕ. ಜಿಲ್ಲೆಯ ಬೆಂಬಲ ಬೆಲೆ ಕೇಂದ್ರಗಳಲ್ಲಿ ಕೆಂಪು ಭತ್ತ ಖರೀದಿಗೆ ಅವಕಾಶ ನೀಡಬೇಕು ಎಂದು ಈ ಹಿಂದೆಯೇ ಸರಕಾರದ ಗಮನ ಸೆಳೆಯಲಾಗಿದೆ. ಆಹಾರ ಇಲಾಖೆ ಮೂಲಕವೂ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಕೆಯಾಗಿದೆ. ಕೇಂದ್ರದಿಂದ ಶೀಘ್ರ ಆದೇಶ ಜಾರಿಯಾಗುವ ನಿರೀಕ್ಷೆ ಇದೆ. ಆದ್ದರಿಂದ ಬೆಂಬಲ ಬೆಲೆ ಕೇಂದ್ರಕ್ಕೆ ಭತ್ತ ನೀಡಲಿಚ್ಛಿಸುವ ಎಂ.ಒ.4 ಭತ್ತ ಬೆಳೆದ ರೈತರು ಸ್ವಲ್ಪ ಸಮಯ ಕಾಯಬಹುದು.
>
> • ಕಿರಣ್ ಕೊಡ್ಗಿ,
> ರಾಜ್ಯ ಆಹಾರ ನಿಗಮದ ಉಪಾಧ್ಯಕ್ಷ

ಹೊಲದಲ್ಲೇ ಮೊಳಕೆಯೊಡೆದ ರಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬಿಟ್ಟು ಬಿಡದೆ ಸುರಿಯುತ್ತಿರುವ ಮಳೆಯ ಆರ್ಭಟ ಗುರುವಾರವೂ ಮುಂದುವರೆದಿದೆ.

ಬುಧವಾರ ರಾತ್ರಿಯಿಂದ ಒಂದೇ ಸಮನೆ ಸುರಿಯುತ್ತಿರುವ ಮಳೆಗೆ ಸಾವಿರಾರು ಹೆಕ್ಟೇರ್ ರಾಗಿ ಮತ್ತು ತೋಟಗಾರಿಕಾ ಬೆಳೆಗಳು ನೆಲಕಚ್ಚಿವೆ. ರಾಶಿ ಹಾಕಿದ ರಾಗಿ ತೆನೆಗಳು ಹೊಲದಲ್ಲೇ ಮೊಳಕೆಯೊಡೆಯಲು ಆರಂಭಿಸಿವೆ. ಶಿಥಿಲಗೊಂಡಿದ್ದ 20ಕ್ಕೂ ಹೆಚ್ಚು ಮನೆ, ಶಾಲೆ ಮತ್ತು ಅಂಗನವಾಡಿ ಕಟ್ಟಡ ನೆಲಸಮವಾಗಿವೆ. ಚಿಕ್ಕಬಳ್ಳಾಪುರದ ಅಮಾನಿ ಗೋಪಾಲಕೃಷ್ಣ ಕೆರೆ ಅಂಗಳಲ್ಲಿ ₹ 4ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಗಾಜಿನ ಮನೆ ಭಾಗಶಃ



ಮಳೆಯಿಂದಾಗಿ ಹೊಲದಲ್ಲೇ ಮೊಳಕೆ ಒಡೆದ ರಾಗಿ ತೆನೆ –ಪ್ರಜಾವಾಣಿ ಚಿತ್ರ

ಮುಳುಗಿದೆ.

ಶಾಲಾ ಕಟ್ಟಡ ಕುಸಿತ: ಕೋಲಾರ, ಕೆಜಿಎಫ್, ಮಾಲೂರು ಹಾಗೂ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 20ಕ್ಕೂ ಹೆಚ್ಚು ಮನೆ, ಹಳೆಯ ಶಾಲೆ ಮತ್ತು ಅಂಗನವಾಡಿ ಕಟ್ಟಡ ಕುಸಿದಿವೆ. ತಿಪ್ಪೇನಹಳ್ಳಿ ಗ್ರಾಮದಲ್ಲಿ ಗುರುವಾರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ಮಧ್ಯಾಹ್ನ ಏಕಾಏಕಿ ಕುಸಿದಿದೆ. ಗೋಡೆ ಕುಸಿಯಲಾರಂಭಿಸುತ್ತಿದ್ದಂತೆ ಶಿಕ್ಷಕರು ವಿದ್ಯಾರ್ಥಿಗಳನ್ನು ಹೊರಗೆ ಕಳುಹಿಸಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿದೆ. 30ಕ್ಕೂ ಹೆಚ್ಚು ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಳೆಯಿಂದಕಟ್ಟಡಶಿಥಿಲಗೊಂಡಿತ್ತು.

ಕೊಚ್ಚಿಹೋದ ಸೇತುವೆ: ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಹತ್ತಾರು ಕೆರೆಗಳು ಕೋಡಿ ತುಂಬಿ ಹರಿದಿದ್ದು, ಸೇತುವೆಗಳ ಮೇಲೆ ನೀರು ಹರಿಯತೊಡಗಿದೆ. ಕೆಲವು ಕಡೆ ರಸ್ತೆಗಳ ಮೇಲ್ಮೈ ಕೊಚ್ಚಿ ಹೋಗಿದೆ.

ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ಅರ್ಕಾವತಿ ನದಿಗೆ ನೀರು ಬಿಡಲಾಗುತ್ತಿದೆ. ಇದರಿಂದ ರಾಮನಗರ ತಾಲ್ಲೂಕಿನ ಗದಗಯ್ಯನದೊಡ್ಡಿ ಬಳಿ ಸೇತುವೆಯೊಂದು ಕೊಚ್ಚಿ ಹೋಗಿದೆ. ಮಾಗಡಿ ತಾಲ್ಲೂಕಿನಲ್ಲಿ ಆರಕ್ಕೂ ಹೆಚ್ಚು ಮನೆಗಳು ಕುಸಿದಿವೆ.

19-11-2021
Pv Pg 08

Lalbagh flower show likely to return for R-Day 2022

Horticulture dept to decide on duration after flowers arrive from across India

JAHNAVI R
BENGALURU, DHNS



The last three flower shows at Lalbagh were cancelled as large crowds were not allowed to gather due to the Covid protocol. DH FILE PHOTO/RANJU P

After Covid-19 forced its cancellation three times in a row, the annual flower show at Lalbagh is expected to be back during Republic Day 2022.

Going with most cultural events this year, the Horticulture Department is considering holding the annual show under the theme of 'Azadi ka Amrit Mahotsav', or the 75th year of Indian Independence.

Going against the tradition of holding the show inside the Glass House, the department is considering spreading the show out to other parts of the botanical garden to ensure social-distancing and observation of Covid norms. "The activities will be scattered," said Rajender Kumar Kataria, principal secretary, Horticulture Department.

Though the show's duration is seven days, this year, the exact duration will be decided on the availability and shelf life of flowers arriving from across the country. The department is expecting wider participation from both displayers of flowers and viewers.

"To conduct a mega event, we will need four to five months of preparation. Even though it will not be on a mega scale, the show will be better than normal. As cargo services are also hit due to Covid-19, we have to see what kind of flowers will be available," said an official from the Horticulture Department. The flower show was organised twice every year — for Independence Day and Republic Day — until 2020. The last three shows were cancelled as large crowds were not allowed to gather due to the Covid protocol. "The protocols issued by both the state and central governments will be strictly adhered to during the flower show," Kataria said.

19-11-2021
Dec Hrd Pg 03